# ಗಡಿನಾಡ ಜನಪದ ಕಲೆಗಳು

**ಡಾ. ಗೋವಿಂದರಾಯ ಎಂ.**
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್
ತುಮಕೂರು ಜಿಲ್ಲೆ, ಕರ್ನಾಟಕ
graya.vinu@gmail.com

'ಕಲೆಗಳು' ಮನುಷ್ಯ ಜೀವನದ ಮನರಂಜನಾ ಸಾಧನಗಳು. ಪ್ರಾಚೀನ ಮಾನವನ ಬದುಕನ್ನು ಬದುಕಿನ ಜಂಜಡದಿಂದ ಬಿಡುಗಡೆ ನೀಡಲು ಇವು ನೀಡಿರುವ ಸಂತೋಷ ಅಷ್ಟಿಷ್ಟಲ್ಲ. ಆಧುನಿಕ ಸಮೂಹ ಮಾಧ್ಯಗಳಿಲ್ಲದಿದ್ದ ಸಮಯದಲ್ಲಿ ಧರ್ಮಾಚರಣೆ, ಜಾತ್ರೆ, ಉತ್ಸವಗಳ ಸಂದರ್ಭಗಳಲ್ಲಿ ಅನೇಕ ಜನಪದ ಕಲೆಗಳು ಹುಟ್ಟಿಕೊಂಡಿವೆ ಎಂದು ಹೇಳಬಹುದಾಗಿದೆ. ಜನಪದರ ಬಹಳಷ್ಟು ಕಲೆಗಳು ಧರ್ಮಾಚರಣೆಯ ಮೂಲದಿಂದ ಪ್ರೇರಣೆಯಿಂದ ಹುಟ್ಟಿ ಬಂದಿದ್ದರೂ ಎಲ್ಲ ಕಲೆಗಳಿಗೂ ಈ ಮಾತು ಅನ್ವಯಿಸಲಾರದು. ಆಚರಣೆಯ ಧೋರಣೆ ಹೊಂದಿದ್ದರೂ ನಿಧಾನವಾಗಿ ತಮಗರಿವಿಲ್ಲದಂತೆ ಮನರಂಜನೆಯತ್ತ ವಾಲಿದ ಮತ್ತು ಮನರಂಜನೆಗಾಗಿಯೇ ಹುಟ್ಟಿಕೊಂಡ ಕಲೆಗಳ ಪ್ರಮಾಣ ಹೆಚ್ಚಿನದು. ಅವರವರ ಜೀವನ ಶೈಲಿಗಳು, ಭೌಗೋಳಿಕ ಪರಿಸರಗಳು, ಸಾಮಾಜಿಕ ಶ್ರೇಣಿಗಳು ಜನಪದರ ಕಲೆಗಳನ್ನು ರೂಪಿಸಿವೆ. ಅವುಗಳ ವೈವಿಧ್ಯತೆ ಅಗಾಧವಾದುದು. ಇಲ್ಲಿ ಮುಖ್ಯವಾಗಿ ಕೋಲಾಟ, ಭಜನೆಯೆಂಬ ಕಲೆಗಳನ್ನು ಸಾಹಿತ್ಯದ ಹಿನ್ನಲೆಯಲ್ಲಿ ಸಂಶೋಧನೆ ನಡೆಸಲಾಗಿದೆ.

**ಕೋಲಾಟ**

ಕೋಲಾಟ ಜಾನಪದ ಪ್ರದರ್ಶನ ಕಲೆಗಳಲ್ಲಿ ಬಹುಮುಖ್ಯವಾದ ಕಲೆಯಾಗಿದ್ದು, ಬಹುಜನರ ಮನ್ನಣೆಯನ್ನು ಪಡೆದಿದೆ. ಹಬ್ಬ ಹರಿದಿನಗಳಲ್ಲಿ, ದೇವರ ಉತ್ಸವಗಳಲ್ಲಿ, ಜಾತ್ರೆಗಳಲ್ಲಿ, ಉಟ್ಲುಪರಿಸೆ ಮುಂತಾದ ಸಾಮೂಹಿಕ ಆಚರಣೆಗಳಲ್ಲಿ ಕೋಲಾಟ ಹಾಕುವುದನ್ನು ಕಾಣುತ್ತೇವೆ. ಕೋಲಾಟ ಹಾಕುವವರು ಸಾಮೂಹಿಕವಾಗಿ ಬಿಳಿ ಅಂಗಿ, ಬಿಳಿ ಪಂಚೆಯನ್ನಾಗಲೀ, ಬಿಳಿ ಪಂಚೆ ಮತ್ತು ಬಿಳಿ ಬನಿಯನ್ ಆಗಲಿ ಧರಿಸಿ, ತಲೆಗೆ ರುಮಾಲು ಅಥವಾ ಕೆಂಪು ವಸ್ತ್ರ ಕಟ್ಟಿಕೊಂಡು, ಸೊಂಟಕ್ಕೊಂದು ಕೆಂಪುವಸ್ತ್ರ ಕಟ್ಟಿಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ವೃತ್ತಾಕಾರವಾಗಿ ನಿಂತರೆಂದರೆ, ಸುತ್ತಲೂ ಜನರೆಲ್ಲಾ ಮುತ್ತಿಕೊಳ್ಳುತ್ತಾರೆ. ಹಾಡು ಹೇಳುವ ಪ್ರಧಾನ ಗಾಯಕ ಅಥವಾ ಕೋಲಾಟ ಹಾಕುತ್ತಿರುವ ಗುಂಪಿನ ಯಾರಾದರೊಬ್ಬರು ಹಾಡಿನ ಮೂಲಕ ಕೋಲುಗಳನ್ನು ಹಾಕುವುದನ್ನು ಕಾಣುತ್ತೇವೆ.

'ಕೋಲಾಟ' ಜನಪದ ಮನರಂಜನೆ ಕಲೆಗಳಲ್ಲೊಂದು. ಕೋಲುಗಳ ಮೂಲಕ ಆಟ ಸಾಗುವುದರಿಂದ ಇದಕ್ಕೆ ಕೋಲಾಟವೆಂಬ ಹೆಸರು ಬಂದಿದೆ. ಸಂಗೀತ ಮತ್ತು ನೃತ್ಯಗಳ ಸಮ್ಮಿಲನವಾಗಿರುವ ಈ ಆಟ ಗ್ರಾಮ ಜೀವನದ ಒಂದು ವಿಶೇಷ ಮನರಂಜನ ಸಾಧನ. ಹೆಚ್ಚಾಗಿ ಸುಗ್ಗಿಯ ಕಾಲದಲ್ಲಿ, ಹಬ್ಬ ಹರಿದಿನಗಳಲ್ಲಿ ಪ್ರಚುರವಿದೆ.

DOI: 10.59176

ಕೋಲಾಟ ಗ್ರಾಮೀಣ ಪ್ರದೇಶದಲ್ಲಿ ಅಪಾರ ಜನಪ್ರಿಯತೆ ಗಳಿಸಿದೆ." ಗ್ರಾಮೀಣ ಪ್ರದೇಶದ ಮನರಂಜನ ಕಲೆಗಳಲ್ಲಿ ಇಂದಿತೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ.

ಕೋಲಾಟದಲ್ಲಿ ಸುಮಾರು ಎಂಟರಿಂದ ಇಪ್ಪತ್ತನಾಲ್ಕು ಜನರವರೆಗೆ ಕೋಲು ಹುಯ್ಯುವ ಕಲಾವಿದರಿರುತ್ತಾರೆ. ಹುಡುಗರಂತೆ ದೊಡ್ಡವರೂ ಭಾಗವಹಿಸುತ್ತಾರೆ. ಅಲ್ಲಿ ಕೋಲುಗಳದೇ ಮುಖ್ಯ ಪಾತ್ರ. ಇವುಗಳನ್ನು ಸಾಮಾನ್ಯವಾಗಿ ನೀರಂಜಿ, ಬೈನೆ, ಸೀಬೆ, ಕಾರೆ ಮುಂತಾದ ಮರಗಿಡಗಳಿಂದ ಮಾಡಲಾಗಿರುತ್ತದೆ. ಆಟದಲ್ಲಿ ಗೆಜ್ಜೆ, ತಾಳ ಮತ್ತು ದಮ್ಮಡಿಗಳನ್ನು ಬಳಸುತ್ತಾರೆ. ತಾಳ ಮತ್ತು ದಮ್ಮಡಿ ಬಾರಿಸಲು ಪ್ರತ್ಯೇಕ ಪರಿಣಿತರಿರುತ್ತಾರೆ. ಕಲಾವಿದರು ತಮ್ಮ ಕಾಲುಗಳಿಗೆ ಗೆಜ್ಜೆ ಕಟ್ಟಿಕೊಳ್ಳುವುದು ಸಾಮಾನ್ಯ. ಇದರಿಂದ ಅವರ ಕುಣಿತಕ್ಕೆ ಆವೇಶ, ಹುಮ್ಮಸ್ಸು ಲಭ್ಯವಾಗುತ್ತದೆ."*೧ ಯಾರೇ ಕೋಲಾಟವನ್ನು ಆರಂಭಿಸುವ ಮೊದಲು ಪ್ರಾರ್ಥನಾ ರೋಪದಲ್ಲಿ ತಮ್ಮ ಇಷ್ಟದೈವದ ಸ್ತುತಿಯೊಂದಿಗೇ ಆರಂಭಿಸುವುದನ್ನು ಕಾಣುತ್ತೇವೆ.

ಶರಣು ಶ್ರೀವಯ್ಯ ಕುಂಟನಾಯಕ ॥
ಶರಣು ಶ್ರೀಪುರುಷೋತ್ತಮಾಧವ ॥
ಶರಣು ಶ್ರೀಹರಿ ಗರುಡವಾಹನ ಸ್ವಾಮಿ ವೆಂಕಟ ನಾಯಕ
ಅಯ್ಯ ಓ ಗಣನಾಯಕ ಶರಣು ಶರಣಯ್ಯ ॥ ಪ॥
ಮಂಚಿ ಮಲ್ಲೆಲು ಮಗಳಿ ರೇಕಲು ॥
ತೆಲ್ಲಗನ್ನರಿ ಪೂವಲು ಸ್ವಾಮಿ ಯರ್ರದಾವಿಡಿ ಮಗ್ಗುಲು
ಅನ್ನಿಗಾತ್ತುರ ನಿನ್ನಗಲಸಿರ
ಅಖಿಲ ಸಿರಗಣ ನಾಯಕ ಸ್ವಾಮಿ ತಿರುಪತೆಂಕಟ ನಾಯಕ
ಶರಣು ಶರಣಯ್ಯ ॥

ಪ್ರತಿಯೊಂದು ಗ್ರಾಮದ ಬಹುತೇಕ ಕಲಾವಿದರು ಕೋಲಾಟದ ಕಲೆಯನ್ನು ಆರಂಭಿಸುವುದಕ್ಕೆ ಮುಂಚೆ ಈ ನಾಂದಿ ಪದ್ಯವನ್ನು ಹಾಡಿಯೇ ಮುಂದುವರೆಯುತ್ತಾರೆ. ಸರ್ವ ವಿಘ್ನ ವಿನಾಶಕನಾದ ವಿನಾಯಕನನ್ನು ಸ್ತುತಿಸಿ, ಅವನಿಗೆ ಮಲ್ಲೆ, ಮರುಗ, ದವನವನ್ನು ನೀಡಿ ಕೈಮುಗಿದು ತಮ್ಮ ಕೆಲಸಗಳನ್ನು ಆರಂಭಿಸುವಂತೆ, ಕೋಲಾಟದ ಸಂದರ್ಭದಲ್ಲಿಯೂ ಇದೇ ಪರಂಪರೆಯನ್ನು ಮುಂದುವರೆಸುತ್ತಾರೆ. ಇಲ್ಲಿ ಸ್ತುತಿ ಪದ್ಯದ ಮೊದಲನೆ ಚರಣದ ನಂತರ ಬರುವ ಪದ್ಯವು ತೆಲುಗಿನದಾಗಿದ್ದರೂ, ಇದು ತೆಲುಗಿನದಲ್ಲವೇನೋ ಎನ್ನುವಷ್ಟು ಸಹಜವಾಗಿರುವುದು ಈ ಭಾಗದ ಜನರು ಭಾಷೆಯನ್ನು ಬೇರೆ ಎಂದು ಭಾವಿಸಿಲ್ಲದೇ ಇರುವುದಾಗಿದೆ.

ಇಂತಹ ನೂರಾರು ಸಾವಿರಾರು ಕೋಲಾಟದ ಪದಗಳು ತೆಲುಗು ಕನ್ನಡ ಮಿಶ್ರಿತವಾಗಿದ್ದು ಅನೇಕ ಸಂದರ್ಭಗಳಲ್ಲಿ ಹಾಡಲ್ಪಡುತ್ತಿವೆ. ಎಂತಹ ಅರಸಿಕನೂ ಈ ತಾಳಕ್ಕೆ, ಮೇಳಕ್ಕೆ, ಹೆಜ್ಜೆಗೆ, ಗೆಜ್ಜೆಗೆ ತಲೆದೂಗಲೇಬೇಕಾದ ಸೊಗಸಾದ ನೃತ್ಯಕಲೆ ಈ ಭಾಗದ ಜನರದ್ದು. ಇಲ್ಲಿನ ದೇವರಹಟ್ಟಿ, ಚನ್ನಸಾಗರದ ಹಟ್ಟಿ, ಪೆಮ್ಮನಹಳ್ಳಿ, ಕೃಷ್ಣಗಿರಿ,

ಆಲದಮರದ ಹಟ್ಟಿ, ವೀರ್ಲಗುಂದಿ, ಶಂಕರಗಲ್ಲು, ರೊಪ್ಪ, ಗುಂಡುಮಾಲೆ, ಮೈನಗಾನಹಳ್ಳಿ ಮುಂತಾದ ಗ್ರಾಮಗಳಲ್ಲಿ ಕೋಲಾಟದಲ್ಲಿ ಹೆಸರು ಮಾಡಿರುವ ಅದ್ಭುತ ಕಲಾವಿದರಿದ್ದಾರೆ.

**ಭಜನೆ**

'ಭಜಿಸು' ಎಂಬ ಅರ್ಥ ನೀಡುವ ಈ ಭಜನೆ ಪ್ರಕಾರವು ಜನಪದರಲ್ಲಿ ಪ್ರಮುಖ ಸ್ಥಾನವನ್ನು ಪಡೆದ ಜನಪದ ಪ್ರದರ್ಶನ ಕಲೆಯಾಗಿದೆ. ದೇವರನ್ನು ಸ್ಮರಿಸುವ ಮೂಲಕ ಭಕ್ತಿ ಪರವಶರಾಗುವುದನ್ನು ಈ ಮೂಲಕ ಕಾಣುತ್ತೇವೆ. ಸಮಸ್ಯೆಯಿಂದ ಹೊರಬರಲು, ಕಷ್ಟಗಳಿಂದ ಪಾರಾಗಲು, ಮಾನಸಿಕ ನೆಮ್ಮದಿಯನ್ನು ಪಡೆಯಲು ಮನುಷ್ಯ ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ಭಜನೆ ಮಾಡುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಗಡಿನಾಡಿನ ಬಹುತೇಕ ಗ್ರಾಮಗಳ ಸುಮಾರು ಕುಟುಂಬಗಳಲ್ಲಿ ವರ್ಷಕ್ಕೊಮ್ಮೆಯಾದರೂ ಭಜನೆ ಮಾಡಿಸುವುದನ್ನು ಕಾಣುತ್ತೇವೆ. ಆಂಧ್ರಪ್ರದೇಶದ ಗಡಿ ಗ್ರಾಮಗಳವರು ಕರ್ನಾಟಕದ ಗಡಿ ಗ್ರಾಮಗಳಿಗೂ, ಕರ್ನಾಟಕದ ಗಡಿ ಗ್ರಾಮಗಳವರು ಆಂಧ್ರಪ್ರದೇಶದ ಗಡಿ ಗ್ರಾಮಗಳಿಗೂ ತೆರಳಿ 'ಅಖಂಡ ಭಜನೆ ಕಾರ್ಯಕ್ರಮ'ಗಳನ್ನು ನಡೆಸಿಕೊಡುವುದನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ತೆಲುಗು ಮಿಶ್ರಿತ ಕನ್ನಡ ಭಜನೆ ಪದಗಳನ್ನು, ಕನ್ನಡ ಮಿಶ್ರಿತ ತೆಲುಗು ಭಜನೆ ಹಾಡುಗಳನ್ನು ಹಾಡುವುದು ಸರ್ವೇ ಸಾಮಾನ್ಯವಾದ ಸಂಗತಿಯಾಗಿದೆ.

ಭಜನೆಗೆ ತಂಬೂರಿ, ತಾಳ, ಡಕ್ಕಿ, ಚಕ್ಕೆಗಳು ಪರಿಕರಗಳಾಗಿದ್ದು, ಹಾಡಿಗೆ ತಕ್ಕ ತಾಳದೊಂದಿಗೆ ಭಜಿಸುವುದನ್ನು ಕಾಣುತ್ತೇವೆ. ತಮ್ಮ ಇಷ್ಟದೈವದ ಸ್ತುತಿಯೊಂದಿಗೆ ಭಜನೆ ಆರಂಭಿಸುತ್ತಾ, ತ್ಯಾಗರಾಜರು, ಅನ್ನಮಾಚಾರ್ಯರು, ಕನಕದಾಸರು, ಪುರಂದರದಾಸರ ಕೀರ್ತನೆಗಳನ್ನೂ, ವೀರಬ್ರಹ್ಮಯ್ಯ, ವೆಂಕಾವಧೂತ, ನ್ಯಾತಪ್ಪಾವಧೂತ, ಮಲ್ಲಪ್ಪಾವಧೂತರ ಹಾಡುಗಳನ್ನೂ, ತಿಪ್ಪೇರುದ್ರಸ್ವಾಮಿ, ಅಜ್ಜಯ್ಯತಾತ, ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ ಮುಂತಾದ ಶರಣರ ಜೀವನ ಚರಿತ್ರೆಗೆ ಸಂಬಂಧಿಸಿದ ಹಾಡುಗಳನ್ನೂ, ಭಕ್ತಿ, ವೈರಾಗ್ಯ, ಆಧ್ಯಾತ್ಮ, ಹುಟ್ಟು–ಸಾವು, ಸ್ವರ್ಗ–ನರಕ, ಇಹ–ಪರಕ್ಕೆ ಸಂಬಂಧಿಸಿದ ಸಾವಿರಾರು ತತ್ವಪದಗಳನ್ನು ಈ ಭಜನೆಗಳಲ್ಲಿ ಬಳಸಿಕೊಳ್ಳುವುದು ವಿಶೇಷ. ಹರಿ–ಹರರಲ್ಲಿ ಭೇದವೆಣಸದೆ ಎಲ್ಲ ಬಗೆಯ ಹಾಡುಗಳನ್ನೂ ಈ ಸಂದರ್ಭದಲ್ಲಿ ಬಳಸಿಕೊಳ್ಳುತ್ತಾರೆ.

ಈ ಗಡಿನಾಡಿನ ಭಜನೆಯ ಸ್ವರೂಪವೆಂದರೆ ಒಂದನೇ ತಾಳದಿಂದ ಹಾಡುಗಳನ್ನು ಪ್ರಾರಂಭಿಸಿ, ಎರಡನೆಯ ತಾಳಕ್ಕೆ ಎತ್ತಿಕೊಂಡು ಹಾಡನ್ನು ಮುಗಿಸುವ ಪದ್ಧತಿ ಇದೆ. ಈ ಭಾಗದಲ್ಲಿ 'ಗುರುಬೋಧನೆ'ಯನ್ನು ತೆಗೆದುಕೊಂಡವರು ಆಯಾ ಗುರು ಪರಂಪರೆಯೊಂದಿಗೆ ಸೇರಿಕೊಂಡು ಭಜನೆ ಮಾಡುವುದನ್ನು ಕಾಣುತ್ತೇವೆ. ಗುರುಬೋಧನೆ ತೆಗೆದುಕೊಂಡಿದ್ದವರಲ್ಲಿ ಯಾರಾದರೂ ಮರಣ ಹೊಂದಿದಾಗ ಅಂದಿನ ರಾತ್ರಿ ಹಾಗೂ ಅವರ ತಿಥಿಯ ದಿವಸ ಭಜನೆ ಕಾರ್ಯಕ್ರಮ ಇದ್ದೇ ಇರುತ್ತದೆ. ಗಣಪತಿ ಸ್ತುತಿಯೊಂದಿಗೆ ಭಜನೆ ಆರಂಭಿಸಿ ಮಂಗಳದ ಹಾಡಿನೊಂದಿಗೆ ಮುಕ್ತಾಯವಾಗುತ್ತದೆ.

ಎರಡನೆ ತಾಳಕ್ಕೆ–

ಅಂಬೀಗರಣ್ಣಾ ಬಾರೋ ನಮ್ಮಣ್ಣ .........

ಹೊಳೆಯ ತಡಾಸು ನಮ್ಮುನ್ನಾ . . .

ನೀರೊಳೆಯ ತಡಾಸು ನಮ್ಮುನ್ನಾ . . ॥ಪ॥

ನಿಂಬೇಯ ವನದೊಳು ನಂಬೀ ತೊಟ್ಟೀಲು ಕಟ್ಟಿ

ನಂಬ್‌ವಂತ್ರು ಮಗಳಯ್ಯಾ...... ಅಂಬಿಗರಣ್ಣ ಹೊಳೆಯ ತಡಾಸು ನಮ್ಮುನ್ನಾ ॥ಪ॥

ಬಾಳೇಯ ವನದೊಳು ಬಾಗೀ ತೊಟ್ಟೀಲು ಕಟ್ಟಿ

ಬಾಳ್‌ವಂತ್ರು ಮಗಳಯ್ಯಾ....... ಅಂಬಿಗರಣ್ಣ ಹೊಳೆಯ ತಡಾಸು ನಮ್ಮುನ್ನಾ ॥ಪ॥

ಅಕ್ಕಾತಂಗೇರಾರು ಮಂದಿ ನನ್ನ ಕೂಡಿ ಏಳು ಮಂದಿ

ಎಲ್ಲಾ ಚೆಲುವೇರು ಬರ್ತಿವೋ........ ಅಂಬಿಗರಣ್ಣ ಹೊಳೆಯ ತಡಾಸು ನಮ್ಮುನ್ನಾ ॥ಪ॥

ಹೀಗೆ ಏರುದನಿಯಲ್ಲಿ ಮುಂದೆ ಒಬ್ಬರು ಹೇಳುತ್ತಿದ್ದರೆ, ಅದನ್ನು ಅನುಸರಿಸಿ ಉಳಿದವರು ಹಿಮ್ಮೇಳವಾಗಿ ಎತ್ತಿ ಹಾಡುವುದು ಬಹು ವಿಶೇಷವಾಗಿರುತ್ತದೆ. ಕೊನೆಗೆ ಮಂಗಳದ ಪದ್ಯದೊಂದಿಗೆ–

“ಮಂಗಳಂ ಹರಿಹರವಿದಾತಾಕೂ........ತ್ರೀಮೂರ್ತುಲಾಕು

ಮಂಗಳಂ ಹರಿಹರವಿದಾತಾಕೂ........

ಮಂಗಳಂ ತತ್ಪತ್ನಿಸುತ ಸಮೀಪುಲೈನಾ ದೇವತಲಕು

ಪೊಂಗುಚೂ ಕರ್ಪೂರಮಾರತಿ ಮಂಗಳಂ ಜಯ ಜಯ ಅನುಚುನು ॥ಪ॥

ಮಂಗಾಳಂ ಜಯಹರ ಗಂಗಾಧರಾ ಸುತ ಮಂಗಳಂ ಜಯ ಮಂಗಳಂ

ಮಂಗಾಳಂ ಜಯಹರ ಮಂಗಳ

ಪಟ್ಟಾಭಿರಾಮ ಮಂಗಳ.....

ತಲ್ಲಿ ನೀವೇ ಮಂಗಳ.....

ತಂಡ್ರಿ ನೀವೇ ಮಂಗಳ......

ಜಯ ಗೋವಿಂದಂ....... ಜಯ ಗೋವಿಂದಂ ಜಯ ಹರಿ ನಮಃ ಪಾರ್ವತೀ ಪತಿ ಹರಹರ ಮಹಾದೇವ....... ಲಕ್ಷ್ಮೀರಮಣ ಗೋವಿಂದಾ....... ಗೋವಿಂದಾ......" ಎಂದು ಮುಕ್ತಾಯ ಮಾಡುತ್ತಾರೆ.

ಹೀಗೆ ಗಡಿಭಾಗದ ಭಜನೆ ಕಲೆಯಲ್ಲಿ ಪುರುಷರು-ಮಹಿಳೆಯರೆಂಬ ಭೇದ- ಭಾವವಿಲ್ಲದೆ, ಮೇಲು-ಕೀಳೆಂಬ ಜಾತಿಯ ತಾರತಮ್ಯವಿಲ್ಲದೆ ಭಗವಂತನ ಸಾನ್ನಿಧ್ಯ ಬಯಸುವ ಆಧ್ಯಾತ್ಮಿಕ ಪ್ರಿಯ ಜನಸಮುದಾಯವೆಲ್ಲವೂ ಭಕ್ತಿಯಿಂದ ಭಗವಂತನನ್ನು ಸ್ಮರಿಸುವುದನ್ನು ಕಾಣುತ್ತೇವೆ. ಭಜನೆ ಎಲ್ಲಾ ಮುಗಿದು ಮನೆಗೆ ಹೋಗುವಾಗ ದೇವರಿಗೆ ಪೂಜೆ ಮಾಡಿ, ಪ್ರಸಾದವನ್ನು ಎಲ್ಲರಿಗೂ ಕೊಟ್ಟು ಕಳುಹಿಸುತ್ತಾರೆ. ರಾತ್ರಿ ಎಂಟೊಂಭತ್ತು ಗಂಟೆಯಿಂದ ಆರಂಭವಾದ ಭಜನೆ ನಿರಂತರವಾಗಿ ಸಾಗುತ್ತಾ, ಒಬ್ಬರ ಹಾಡು ಮುಗಿದರೆ, ಮತ್ತೊಬ್ಬರು ಪ್ರಾರಂಭಿಸುತ್ತಾ, ಮಧ್ಯೆ ಮಧ್ಯೆ ಉಪಕತೆಗಳನ್ನು, ತಮಾಷೆಯ ಕತೆಗಳ ಭಾಗಗಳನ್ನು ಹೇಳುತ್ತಾ ಬೆಳಿಗ್ಗೆಯವರೆಗೂ ಈ ಭಜನೆ ಕಾರ್ಯಕ್ರಮ ನಡೆಯುವುದನ್ನು ಕಾಣುತ್ತೇವೆ. ಸ್ವಾರಗಿರಿ, ರತ್ನಗಿರಿ, ಶಂಕರಗಲ್ಲು, ಗುಂಡುಮಲೆ, ರಾಳ್ಳಪಲ್ಲಿ, ರೊಪ್ಪ, ಮೈನಗಾನಹಳ್ಳಿ ಮುಂತಾದ ಪ್ರದೇಶಗಳಲ್ಲದೆ ಚನ್ನಕೇಶವಪುರ, ಅರಸೀಕೆರೆ, ಕನ್ನಮೇಡಿ, ದವಡಬೆಟ್ಟ, ಕಿಲಾರ್ಲಹಳ್ಳಿ, ಪಾವಗಡ ಮುಂತಾದ ಪ್ರದೇಶಗಳಲ್ಲಿ ಭಜನಾ ತಂಡಗಳಿರುವುದನ್ನು ಕಾಣುತ್ತೇವೆ.

**ಚಕ್ಕೆಗಳ ಭಜನೆ :**

ಆಂಧ್ರ ಪ್ರದೇಶದ ಹಳ್ಳಿಗಳಲ್ಲಿ ಪ್ರಾಚೀನ ಕಾಲದಿಂದಲೂ ಕಂಡುಬರುತ್ತಿರುವ ಕಲಾ ಪ್ರಕಾರಗಳಲ್ಲಿ 'ಚಕ್ಕೆ ಭಜನೆ' ಮುಖ್ಯವಾದುದು. ಇತ್ತೀಚೆಗೆ ಆಂಧ್ರಪ್ರದೇಶದ ಗಡಿ ಭಾಗದ, ಕರ್ನಾಟಕದ ಪ್ರದೇಶಗಳಲ್ಲಿಯೂ ಈ ಪ್ರಕಾರ ಕಂಡುಬರುತ್ತಿರುವುದು ವಿಶೇಷ. ದೇವರ ಗರುಡುಗಂಭವನ್ನು ಹಿಡಿದುಕೊಂಡು ಮನೆಮನೆಗೆ ತಿರುಗುತ್ತಾ, ಭಕ್ತಿಭಾವದಿಂದ ಭಜನೆಗಳನ್ನು ಮಾಡುತ್ತಾರೆ. ಹಳ್ಳಿಗಳಲ್ಲಿ ಉತ್ಸುಕರಿರುವ ಯುವಕರೆಲ್ಲರೂ ತಮ್ಮ ಕೆಲಸವಿಲ್ಲದ ಬಿಡುವಿನ ಸಮಯದಲ್ಲಿ ಸುಮಾರು ಇಪ್ಪತ್ತು ಮಂದಿಯಷ್ಟು ಜನ ಸೇರಿಕೊಂಡು, ಗುರುವಿನ ನೇತೃತ್ವದಲ್ಲಿ, ರಾತ್ರಿ ಸಮಯದಲ್ಲಿ ಕಟ್ಟುನಿಟ್ಟಾಗಿ ಈ ವಿದ್ಯೆಯನ್ನು ಕಲಿತುಕೊಳ್ಳುತ್ತಾರೆ. ಇದು ಅಷ್ಟು ಸುಲಭವಾಗಿ ಮಾಡುವ ಭಜನೆಯಲ್ಲ. ಇದು ಶಾಸ್ತ್ರೀಯವಾದ ಜಾನಪದ ನೃತ್ಯಕಲೆ. ಶಿಸ್ತುಬದ್ಧವಾಗಿ ನಿರ್ವಹಿಸಿ ಮಾಡಬೇಕಾದ ವಿಶಿಷ್ಟ ಕಲೆ.

ಇದು ಶ್ರಮದಿಂದ ಕೂಡಿದ ಕಲಾರೂಪ. ಎಲ್ಲರೂ ಸಮಾನವಾಗಿ ಹೆಜ್ಜೆಗಳನ್ನು ಹಾಕಬೇಕು. ಎಲ್ಲರೂ ಒಂದೇ ರೀತಿಯಲ್ಲಿ ವೃತ್ತಾಕಾರವಾಗಿ ತಿರುಗಬೇಕು. ಒಂದೇ ರೀತಿಯ ಕೈಗಳಲ್ಲಿ ಎಲ್ಲರೂ ಘಲ್ಲುಘಲ್ಲೆನ್ನುವ ಚಕ್ಕೆಗಳನ್ನು ಹಿಡಿದುಕೊಳ್ಳಬೇಕು. ಎಲ್ಲರೂ ಜೊತೆಗೂಡಿ ತಾಳ ಹಾಕಬೇಕು. ತಾಳಕ್ಕೆ ಹೊಂದಿಕೊಳ್ಳುವಂತೆ ಹಾಡನ್ನು ಹಾಡಬೇಕು. ಹಾಡಿಗೆ ತಕ್ಕ ಭಾವವನ್ನು ಮುಖದಲ್ಲಿ ತೋರಿಸಬೇಕು. ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಬೇಕು. ಒಂದೇ ರೀತಿಯಲ್ಲಿ ನೃತ್ಯ ಮಾಡಬೇಕು. ಒಂದೇ ರೀತಿಯಲ್ಲಿ ನಿಂತು, ಚಲನೆಯನ್ನು ತೋರಿಸಬೇಕು. ಒಂದೇ ಸಾರಿ ಎಗರಬೇಕು, ಕುಳಿತುಕೊಳ್ಳಬೇಕು, ಸುತ್ತಲೂ ತಿರುಗಬೇಕು, ಎಗರುತ್ತಾ, ಸುತ್ತಲೂ ತಿರುಗುತ್ತಾ ಭಜನೆ ಮಾಡುವುದು ಚಕ್ಕೆ ಭಜನೆಯ ವೈಶಿಷ್ಟ್ಯತೆ. ಪ್ರತಿ ಹಾಡಿಗೂ ನೃತ್ಯ ಬದಲಾಗುತ್ತದೆ, ಹಾಡು ಬದಲಾದಂತೆ ಭಾವ ಬದಲಾಗುತ್ತದೆ,

DOI: 10.59176
http://www.kristujayantijournal.com/index.php/KJKSP

ವರಸೆಗಳು ಬದಲಾಗುತ್ತವೆ, ತಾಳ ಬದಲಾಗುತ್ತದೆ. ಆಂಧ್ರದವರ ಕಲಾರೂಪಗಳಲ್ಲೇ ಚಕ್ಕೆ ಭಜನೆ ಒಂದು ಸುಂದರ ಕಲಾರೂಪವಾಗಿದೆ.

ಈ ರೀತಿಯ ಶಾಸ್ತ್ರೀಯವಾದ ಜಾನಪದ ವಿದ್ಯೆ ಗಡಿನಾಡ ಭಾಗದಲ್ಲಿ ಅತ್ಯಂತ ಜನಮನ್ನಣೆಯನ್ನು ಪಡೆದಿದೆ. ಊರಿನ ಮುಖಂಡರೊಬ್ಬರ ನೇತೃತ್ವದಲ್ಲಿ, ಇದರಲ್ಲಿ ನುರಿತ ಕಲಾವಿದನೊಬ್ಬನನ್ನು ಗುರುತಿಸಿ, ಆತನ ಮೂಲಕ ತಮ್ಮೂರಿನ ಯುವಕ–ಯುವತಿಯರಿಗೆ ಸೂಕ್ತ ತರಬೇತಿ ನೀಡಿ ಒಂದು ದಿನ ನಿಗದಿಪಡಿಸಿ ಸಾದರ ಪಡಿಸುವ ಈ ಕಲೆ ಸುಂದರ ನಯನಮನೋಹರವಾದದ್ದು.

ಚಕ್ಕೆ ಭಜನೆಯಲ್ಲಿನ ತಾಳ, ಲಯ, ಗಮಕ, ಹಾಡು, ಆಂಗಿಕಾಭಿನಯ, ಮುಖಾಭಿನಯ, ಭಕ್ತಿ ಹಾಡುಗಳ ತನ್ಮಯತೆಯಲ್ಲಿ ಮುಖದಲ್ಲಿ ಕಾಣುವ ಸಾತ್ವಿಕ ಭಾವ, ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ಭಾಷೆ, ಚಿಕ್ಕ ಗೆಜ್ಜೆಗಳ ನೃತ್ಯ, ವೇಷಭೂಷಣ, ಎಲ್ಲರೂ ಒಂದೇ ರೀತಿಯಲ್ಲಿ ತಿರುಗುತ್ತಾ, ಕುಳಿತುಕೊಳ್ಳುತ್ತಾ, ಎದ್ದು ತಿರುಗುತ್ತಾ ಒಂದು ಶಿಸ್ತಿನಿಂದ ಕೂಡಿದ ಶಾಸ್ತ್ರೀಯವಾದ ತಾಳ, ಸ್ವರಗತಿ, ಆ ಸಮೂಹವನ್ನು ಒಂದೇ ತಾಳದ ಮೇಲೆ ನಡೆಸುವ ಗುರು, ಪ್ರೇಕ್ಷಕರನ್ನು ಮುಗ್ಧರನ್ನಾಗಿಸುವ ಸುಶ್ರಾವ್ಯವಾದ ಹಾಡುಗಳಿಂದ ಗ್ರಾಮೀಣರು ಈ ಕಲೆಯನ್ನು ಉಳಿಸಿಕೊಳ್ಳುತ್ತಾ ಬರುತ್ತಿದ್ದಾರೆ. ಇಂದಿಗೂ ಈ ಕಲಾರೂಪ ಜೀವಂತಿಕೆಯಿಂದಿದೆ. ಕೇವಲ ಉತ್ಸಾಹದಿಂದ ಮಾಡುವ ಭಜನೆಯಲ್ಲ, ಇದು ಭಕ್ತಿ ತನ್ಮಯತೆಯಿಂದ ಭಗವಂತನನ್ನು ಬೇಡಿಕೊಳ್ಳುವುದು, ಹಾಗೆ ಬೇಡಿಕೊಳ್ಳುತ್ತಾ ಭಕ್ತಿ ಪರವಶತೆಯಲ್ಲಿ ಅಮಿತ ಉತ್ಸಾಹದಿಂದ ಮಾಡುವ ನೃತ್ಯ ಈ ಚಕ್ಕೆ ಭಜನೆ. ಭಜನೆ ಮಾಡುವವರು ಭಕ್ತಿ ಭಾವದಲ್ಲಿ ಮುಳುಗಿ ಹೋಗುವುದಲ್ಲದೆ ಪ್ರೇಕ್ಷಕರನ್ನು ಕೂಡ ತನ್ಮಯತೆಯಲ್ಲಿ ಮಿಂದೇಳುವಂತೆ ಮಾಡುತ್ತಾರೆ.

ಚಕ್ಕೆ ಭಜನೆ ಪ್ರೇಕ್ಷಕರನ್ನು ಉತ್ತೇಜಿಸುತ್ತದೆ. ಮುಖ್ಯವಾಗಿ ಹಳ್ಳಿಗಳಲ್ಲಿ ಬಿಡುವಿನ ಕಾಲದಲ್ಲಿ ಮಳೆಯಿಲ್ಲದ ದಿನಗಳಲ್ಲೂ, ಹಬ್ಬ–ಹರಿದಿನಗಳಲ್ಲೂ, ದೇವರ ಕಾರ್ಯಗಳಲ್ಲೂ, ಜಾತ್ರೆಗಳಲ್ಲೂ, ರಥೋತ್ಸವಗಳಲ್ಲೂ ಚಕ್ಕೆ ಭಜನೆ ನೃತ್ಯ ಮಾಡುತ್ತಾರೆ. ಭಕ್ತಿಗಾಗಿ, ಮುಕ್ತಿಗಾಗಿ ಈ ಭಜನೆ ಮಾಡುತ್ತಾರೆ. ಭಜನಾ ಸಮೂಹ ಕಟ್ಟುನಿಟ್ಟಾಗಿ ಭಜನೆ ಪ್ರಾರಂಭಿಸಿ, ಭಜಿಸುವವರಷ್ಟೇ ಅಲ್ಲದೆ ಸುತ್ತಲಿನ ಗ್ರಾಮಗಳಿಗೂ ಯತ್ರಾ ಸ್ಥಳಗಳಿಗೂ ಹೋಗಿ ಅವರ ಪ್ರಾವೀಣ್ಯತೆಯನ್ನು ಪ್ರದರ್ಶಿಸುತ್ತಾರೆ. ಕೇವಲ ಹಾಡುಗಳಷ್ಟೇ ಅಲ್ಲದೆ ಭಕ್ತಿಗೀತೆಗಳು, ಮಹಾಭಾರತ–ಭಾಗವತ–ರಾಮಾಯಣಕ್ಕೆ ಸಂಬಂಧಿಸಿದ ಹಾಡುಗಳು, ನೀತಿ ಗೀತೆಗಳು, ವೀರಗಾದೆಗಳು, ರಾಮಾಯಣ, ಮಹಾಭಾರತದ ಕತೆಗಳ ಸಾರವನ್ನು ಹಂತಹಂತವಾಗಿ ಹಾಡುತ್ತಾ, ಕುಣಿಯುತ್ತಾ, ವಚನದಲ್ಲಿ ಕತೆಯನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಭಜನೆ ಮಾಡುತ್ತಾರೆ.

ಚಕ್ಕೆ ಭಜನೆ ಆರಂಭ ಗುರು ಪೂಜೆಯಿಂದ ನೃತ್ಯದ ಮೂಲಕ ಸಾಗುತ್ತದೆ. ಪ್ರತಿ ಗುರುವಿನ ಚಕ್ಕೆ ಭಜನೆಯ ಶೈಲಿಯಲ್ಲಿ ತುಂಬಾ ವೈವಿಧ್ಯತೆ ಇರುತ್ತದೆ.

**ಚಕ್ಕೆ ತಯಾರಿಸುವ ವಿಧಾನ :** ಒಂದು ಅಡಿ ಉದ್ದದ ಚಕ್ಕೆಯನ್ನು ತೆಗೆದುಕೊಂಡು ಅದರ ಎರಡು ತುದಿಯಲ್ಲಿ ಶಬ್ದ ಬರುವುದಕ್ಕಾಗಿ ವೃತ್ತಾಕಾರವಾದ ಕಬ್ಬಿಣದ ಅಥವಾ ಹಿತ್ತಾಳೆ ಬಿಲ್ಲೆಗಳನ್ನಾಗಲೀ ಒಂದೊಂದು ತುದಿಗೆ ಎರಡೆರಡು ಬಿಲ್ಲೆಗಳನ್ನು ಹಾಕುತ್ತಾರೆ. ತಾಳದ ರೀತಿ ಚಕ್ಕೆಗಳನ್ನು ಹೊಡೆಯುವಾಗ ಇಂಪಾದ ಶಬ್ದವನ್ನು ಕೊಡುತ್ತದೆ. ಈ ಧ್ವನಿ

ಗಂಭೀರವಾಗಿ ಒಂದೇ ಶ್ರುತಿಯಲ್ಲಿ ಕೇಳಿ ಬರುತ್ತಾ, ಭಜನೆ ನೋಡುವವರನ್ನು ಉತ್ಸಾಹ ಪಡಿಸುತ್ತದೆ. ಈ ಚಕ್ಕೆಗಳ ಮೇಲೆ ಸುಂದರವಾದ ಶಿಲ್ಪ ಕೆತ್ತನೆ ಇರುತ್ತದೆ.

ಈ ಚಕ್ಕೆ ಭಜನೆಯ ಗುಂಪುಗಳಲ್ಲಿ ಕಥಾ ವಸ್ತುವನ್ನಾಧರಿಸಿ ಸ್ವಲ್ಪ ಜನ ಪುರುಷರು ಇನ್ನು ಸ್ವಲ್ಪ ಜನ ಪುರುಷರೇ ಸ್ತ್ರೀ ಪಾತ್ರಧಾರಿಗಳಾಗಿರುತ್ತಾರೆ. ಕೆಲವೊಮ್ಮೆ ಹೆಣ್ಣುಮಕ್ಕಳೂ ಈ ಗುಂಪುಗಳಲ್ಲಿರುವುದನ್ನು ಕಾಣುತ್ತೇವೆ. ಉದಾ:– ಗೋಪಿಕಾ ಕ್ರೀಡೆಗಳಲ್ಲಿ ಪುರುಷರು ಕೃಷ್ಣನ ವೇಷವನ್ನು, ಸ್ತ್ರೀಯರು ಗೋಪಿಕೆಯರಾಗಿ ನೃತ್ಯ ಮಾಡುತ್ತಾರೆ.

**ವೇಷಭೂಷಣ:–** ಎಲ್ಲರೂ ಒಂದೇ ಬಣ್ಣದ ತಲಕಟ್ಟನ್ನು ಸುಂದರವಾಗಿ ಕಟ್ಟಿಕೊಳ್ಳುತ್ತಾರೆ. ಒಂದು ಕಡೆಗೆ ಟೇಪನ್ನು ಕುಚ್ಚಾಗಿ ತಲೆಗೆ ಕಟ್ಟಿಕೊಳ್ಳುತ್ತಾರೆ. ಪಂಚೆಗಳನ್ನು ನೃತ್ಯಕ್ಕೆ ಅಡ್ಡ ಬರದಂತೆ ಕುಣಿಯುವುದಕ್ಕೆ ಅನುಕೂಲವಾಗುವಂತೆ ಕಚ್ಚೆಪಂಚೆ ಅಥವಾ ಸೈಕಲ್ ಪಂಚೆ ಕಟ್ಟುತ್ತಾರೆ. ಪುರುಷರು ಒಂದೇ ಬಣ್ಣದ ಬನಿಯನ್ ಧರಿಸುತ್ತಾರೆ. ಸ್ತ್ರೀ ಪಾತ್ರಧಾರಿಗಳು ಲಂಗ, ರವಿಕೆ, ದಾವಣಿ ಧರಿಸುತ್ತಾರೆ. ಈ ಸಮೂಹಗಳಲ್ಲಿ ೨೦ ರಿಂದ ೩೦ ರ ವರೆಗೂ ಸಮಗುಂಪಿನಲ್ಲಿ ನೃತ್ಯಗಾರರಿರುತ್ತಾರೆ. ೧೨ ವರ್ಷದಿಂದ ೨೫ ವರ್ಷದ ವಯಸ್ಸಿನ ಯುವಕರೆಲ್ಲರೂ ನೃತ್ಯದಲ್ಲಿ ಭಾಗವಹಿಸುವರು. ಚಕ್ಕೆ ಭಜನೆ ವ್ಯಾಯಾಮದಿಂದ ಕೂಡಿದ ಕಲಾರೂಪ, ಇದಕ್ಕೆ ಸಮರ್ಥರಾದವರೇ ಭಾಗವಹಿಸುತ್ತಾರೆ. ಒಂದೊಂದು ಗುಂಪನ್ನು ಸಿದ್ಧಮಾಡುವುದಕ್ಕೆ ಮೂರು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಅಲ್ಲಿಗೂ ಗುಂಪಿಗೆ ಚಕ್ಕಭಜನೆಯ ಪರಿಪಕ್ವತೆ ಬರುವುದು ಕಷ್ಟ.

**ತಾಳ್ಮೆ–ಜಾಣ್ಮೆ:–** ಚಕ್ಕಭಜನೆಯನ್ನು ಕಲಿಸುವ ಆರಂಭದಲ್ಲಿ ಗುರು ತುಂಬಾ ಶ್ರಮಿಸಬೇಕಾಗುತ್ತದೆ. ಎಲ್ಲರೂ ಹೇಗೆ ನಿಲ್ಲಬೇಕು, ಒಬ್ಬೊಬ್ಬರಿಗೂ ಅವರವರು ನಿಲ್ಲುವ ಭಂಗಿಯನ್ನು ಹೇಳುತ್ತಾ, ವೃತ್ತಾಕಾರವಾಗಿ ಪ್ರತಿಯೊಬ್ಬರನ್ನು ಸೇರಿಸುವನು. ಇದೇ ಪ್ರಥಮ ಹಂತ. ಇದರ ನಂತರ ಮೊದಲನೆಯ ತಾಳ, ಎರಡನೆಯ ತಾಳ, ಮೂರನೆಯ, ನಾಲ್ಕು ಹೀಗೆ ಹತ್ತರವರೆಗೂ ಗುರುವು ಹೇಳಿಕೊಡುತ್ತಾರೆ. ಒಂದು ಹೆಜ್ಜೆ, ಎರಡು ಹೆಜ್ಜೆ, ಕುಪ್ಪಳಿಸುವ ಗಸ್ತು, ಮೂರು ಜನರ ಗುಂಪಿನ ಗಸ್ತು, ಪದ್ಮವ್ಯೂಹ, ಹೊರಕ್ಕೆ–ಒಳಕ್ಕೆ ಹಾಕುವ ಗಸ್ತು, ಕುದುರೆ ಶಬ್ದದಂತಹ ಗಸ್ತು ಈ ರೀತಿಯ ವೈವಿಧ್ಯಪೂರ್ಣವಾದ ನೃತ್ಯಗಳನ್ನು ಗುರು ಹೇಳಿಕೊಡುತ್ತಾರೆ.

**ಪ್ರಾರಂಭ:–** ಈ ನೃತ್ಯವನ್ನು ಆರಂಭಿಸುವ ಮುನ್ನ ದೇವರಿಗೆ ಕಾಯಿ ಹೊಡೆದು, ಪೂಜೆ ಸಲ್ಲಿಸಿ, ಚಕ್ಕೆಗಳನ್ನು ಹಿಡಿದುಕೊಂಡು ಸಾಷ್ಟಾಂಗ ನಮಸ್ಕರಿಸುತ್ತಾರೆ. ಎಲ್ಲರೂ ವೃತ್ತಾಕಾರದಲ್ಲಿ ನಿಂತುಕೊಂಡು ಒಂದೇ ರೀತಿಯ ಲಯದಿಂದ ಚಕ್ಕೆಗಳನ್ನು ಆಡಿಸುತ್ತಾರೆ. ಗುರುವು ಆಡಲು ಪ್ರಾರಂಭಿಸಿದಾಗ ಗುಂಪಿನವರೆಲ್ಲ ಧ್ವನಿಗೂಡಿಸುತ್ತಾರೆ. ಇದಾದ ಮೇಲೆ ಒಂದೊಂದಾಗಿ ಹೆಜ್ಜೆ ಹಾಕಿಸುತ್ತಾರೆ. ಹೀಗೆ ಬಲಗಾಲು ಎಡಗಾಲನ್ನು ಆಡಿಸುತ್ತಾರೆ. ಚಾಕಚಕ್ಯತೆಯಿಂದ ಚಕ್ಕೆಗಳನ್ನು ಆಡಿಸುತ್ತಾ ಇರುತ್ತಾರೆ. ಗುರು ಇದ್ದಕ್ಕಿದ್ದಂತೆ ನಿಲ್ಲಿಸಿದಾಗ ಗುಂಪಿನಲ್ಲಿದ್ದವರೆಲ್ಲರೂ ಕೂಡ ನಿಂತು ಬಿಡುತ್ತಾರೆ. ಆಗ ಎಲ್ಲೆಡೆಯೂ ನಿಶ್ಯಬ್ಧ. ಈ ಸನ್ನಿವೇಷ ಅದ್ಭುತವಾಗಿರುತ್ತದೆ. ನೃತ್ಯ ಮೇಲ್‌ಸ್ಥರಕ್ಕೆ ಹೋದಾಗ ಕೂಡ ಈ ರೀತಿಯ ನಿಲುಗಡೆ ಇರುತ್ತದೆ.

ಇದನ್ನು ಪಾರಮಾರ್ಥಿಕದಲ್ಲಿ 'ಕುಲುಕುವ ಭಜನೆ' ಎಂದು ಕರೆಯುತ್ತಿದ್ದರು. ಭಜನೆಗಳಲ್ಲಿ ೭ ರೀತಿ ಇವೆ. ಅದರಲ್ಲಿ ಹರಿಭಜನೆ, ಊರು ಭಜನೆ, ಕುಲುಕು ಭಜನೆ, ಪಂಡರಿ ಭಜನೆ, ಕೋಲಾಟ ಭಜನೆ, ಸಪ್ತತಾಳ ಭಜನೆ, ವೇದಾಂತ ಭಜನೆ– ಇವುಗಳಲ್ಲಿ ಕುಲುಕು ಭಜನೆಯು ಕಾಲಕ್ರಮೇಣ ಚಕ್ಕೆ ಭಜನೆಯಾಗಿ ರೂಪುಗೊಂಡಿದೆ."*[೧]

ಗಡಿನಾಡಿನ ಬಹುತೇಕ ಹಳ್ಳಿಗಳಲ್ಲಿರುವ ಈ ಕಲಾ ಪ್ರಕಾರದಲ್ಲಿ ಕೆಲವು ಮನರಂಜನೆಯ ಗೀತೆಗಳನ್ನು ವಿಭಿನ್ನವಾದ ನೃತ್ಯದೊಂದಿಗೆ ಅಭಿನಯಿಸುವುದು ಇದರ ವಿಶೇಷತೆಯಾಗಿದೆ.

**ಚಕ್ಕೆ ಭಜನೆ ಗೀತೆಗಳು:**

"ಕಾಕರ ಚೆಟ್ಟು ಮ್ಯಾಕಲ ಮೇಸೆ ಕೋಡಲ... ಕೋಡಲಾ ॥

ನುವ್ವು ಎಕ್ಕಡ ಪೋಯಿನಾವೆ ಕೋಡಾಲ.... ಕೋಡೆಲ್ಲ ॥

ಚೆಪ್ಪಿನಪನಿ ಸೆಯ್ಯಪೋತೆ ಮಾಮಯ್ಯ ಮಾಮಯ್ಯ

ಕಾಕರ ಚೆಟ್ಟು ಮ್ಯಾಕಲ ಮೇಸೆ ಮಾಮಯ್ಯ ಮಾಮಯ್ಯ

ಕೊಪ್ಪನಿಂಡ ಪೂವಲೇಮೆ ಕೋಡಲಾ ಕೋಡಾಲ

ನೀಕು ಎವರು ಮುಡಿಪಿನಾರೆ ಕೋಡಲ ಕೋಡಾಲ

ಮಾಮಾಗಾರಿ ಮಲ್ಲೆಚೆಟ್ಟು ಮಾಮಯ್ಯ ಮಾಮಯ್ಯ...

ಕೊಮ್ಮ ತೆಗುಲಿ ಕೊಪ್ಪನಿಂಡೆ ಮಾಮಯ್ಯ ಮಾಮಯ್ಯ...

(ಪೈ)ಮೈಯೆಲ್ಲ ಬುರುಜೇಮಿ ಕೋಡಾಲ ... ಕೋಡಾಲ

ನೀಕು ಎವ್ವರು ಪೂಸಿನಾರೆ ಕೋಡಾಲ ... ಕೋಡಾಲ

ಮಂಚಿನೀಡ್ಲು ಟ್ಯಾಂಕಿ ಕಡ ಮಾಮಯ್ಯ ಮಾಮಯ್ಯ

ಕಾಲು ಜಾರಿ ಪಡೇನಯ್ಯ ಮಾಮಯ್ಯ ಮಾಮಯ್ಯ

ಸೆಂಪಂತ ಕಟ್ಲೇಮೆ ಕೋಡಾಲ ... ಕೋಡಾಲ

ಅಡಿ ಟಿಪ್ಪಣಿ

[೧] ಡಾ. ಮಿಕ್ಕಿಲಿನೇನಿ ರಾಧಾ ಕೃಷ್ಣ ಮೂರ್ತಿ: 'ತೆಲುಗುವಾರಿ ಜಾನಪದ ಕಳಾ ರೂಪಾಲು'; ತೆಲುಗು ವಿಶ್ವ ವಿದ್ಯಾಲಯಂ ಹೈದಾರಬಾದ್ ಪುಟ ಸಂಖ್ಯೆ –೬೩೮, ೬೩೯ ಕನ್ನಡಕ್ಕೆ ಕೆ. ಜಗನ್ನಾಥ್. ೧೯೯೨.

ನಿನ್ನು ಎವ್ರು ಕೊರಿಕಿನಾರೆ ಕೋಡಾಲ ... ಕೋಡಾಲ

ಎದರಿಂಟಿ ರಾಮಚಿಲಕ ಮಾಮಯ್ಯ ಮಾಮಯ್ಯ

ಮುದ್ದುಪೆಟ್ಟಿ ಕೊರಕಿಂದಯ್ಯ ಮಾಮಯ್ಯ ಮಾಮಯ್ಯ

ಅನ್ನಿಟಿಕನ್ನಿ ಅನ್ನಿಗಾನಿ ಅರಿವುಗಾನಿ ಚೆಪ್ಪುನಾವು

ಮಂಚಂಕಿಂದ ವಾಡೆವ್ಡೆ ಕೋಡಾಲ ... ಕೋಡಾಲ

ಪಿಲ್ಲಿಕಿ ಜರಮು ವಚ್ಚಿನಾವಿ ಮಾಮಯ್ಯ ಮಾಮಯ್ಯ

ನಲ್ಲಿಕೋಸಮೊಚ್ಚಾಡಯ್ಯೊ ಮಾಮಯ್ಯ ಮಾಮಯ್ಯ"*[೨]

ಹೀಗೆ ಸಂಭಾಷಣೆಯ ರೀತಿಯಲ್ಲಿ ಸಾಗುವ ನೃತ್ಯರೂಪಕಗಳು ಕೇಳುಗರಿಗೆ ಕುತೂಹಲವನ್ನೂ, ಬದುಕಿನ ವಾಸ್ತವತೆಯ ಅರಿವನ್ನೂ ಮಾಡಿಸುತ್ತದೆ. ದಿನನಿತ್ಯದ ಸಾಮಾಜಿಕ ಬದುಕಿಗೆ ಹತ್ತಿರವಾಗುವ ಇಂತಹ ಸಂಭಾಷಣೆಗಳು ನೈತಿಕತೆಯ ಸಮಾಜಕ್ಕೆ ದಾರಿಮಾಡಿಕೊಡುವ ಉದ್ದೇಶವನ್ನು ಹೊಂದಿರುತ್ತವೆ.

"ನೇನು ಚಿನ್ನದಾನ್ನಿ ನಲ್ಲೂರಿ ಬೋಗಮುದಾನಿ

ಚೂಡ ಚಕ್ಕನಿದಾನಿ ಬೊಂಬಾಯಿ ಕುರ್ರದಾನಿ ॥ಪ॥

ರೊಂಡು ಜಡಲುವೇಸಿ ಬಡಿದಾವನ ಪೋತವುಂಟೇ

ನಾ ಜಡಲು ಸೂಸಿನವಾಡು ಬಡಿಕೆ ಪೋನೇ ಪೋಡು

ಚಿಲಕ ಸೀರ ಕಟ್ಟೇ... ಸಿಲುಮಾಕಿ ನೇನು ಪೋತೆ

ನಾ ಸೀರ ಸೂಸಿನವಾಡು ವಾಡು ಸೀಟು ಇಡಿಸಿನಾಡು

ವರಾಗೊಪ್ಪುಕಟ್ಟಿ ಕೋಮಟಿಂಟಿಕಿ ನೇನು ಪೋತೆ

ನಾ ಕೊಪ್ಪು ಸೂಸಿನವಾಡು ನಾಕು ಅಪ್ಪು ಇಚ್ಚಿನಾಡು

ಮೊಗುಡು ಮೋಟರು ಮೀದ ತೆಲಿಕಾಡು ಮಿದ್ದಮೀದ

---

ಅಡಿ ಟಿಪ್ಪಣಿ

*[೨] ಸಣ್ಣಮ್ಮ (ವಕ್ತೃ ಗಾಯಕರು) ; ವಯಸ್ಸು ೫೫ ; ಶಂಕರಗಲ್ಲು, ಮಡಕಶಿರಾ ತಾಲ್ಲೂಕು.

DOI: 10.59176

ಕದಲಾಡಿ ವಸ್ತಾನಂಟಿವೆ ಮೈಸೂರಿ ರಬ್ಬರು ಬೊಮ್ಮ"*[೩]

ತನ್ನ ಸೌಂದರ್ಯದ ಬಗೆಗಿನ ಅದಮ್ಯ ವಿಶ್ವಾಸದ ತರುಣಿಯೊಬ್ಬಳು ತನ್ನ ಚೆಲುವಿನ ಬಗೆಗೆ ಹೆಮ್ಮೆ ಪಡುತ್ತಾ, ತನ್ನನ್ನು ನೋಡಿ ಇತರರು ತನ್ನ ಸುತ್ತಾ ಹೇಗೆ ಸುತ್ತುತ್ತಾರೆ ಮತ್ತು ತನ್ನಿಂದ ಅವರು ತಮ್ಮ ಕೆಲಸ ಕಾರ್ಯಗಳನ್ನು ಮರೆಯುವ ರೀತಿಯನ್ನು ತಿಳಿಸುತ್ತದೆ. ಅತ್ಯಂತ ಮನರಂಜನೀಯವಾದ ಹಾಡಾಗಿದೆ.

"ಅತ್ತರ ಸಾಯೇಬು ಮಂಚೋಡನಿ ಉತ್ತರಮೊಚ್ಚಿಂದೋಯಮ್ಮ

ಉತ್ತರಮೊಸ್ತೇ ನಾ ಮೊಗುಡು ಊರ್ಲೊ ಲೇಡಮ್ಮಾ ಯಮ್ಮಾ ಊರ್ಲೊ ಲೇಡಮ್ಮಾ

ಅತ್ತರ ಸಾಯೇಬು ರಾರಾ ನಾ ಅಂದಗಾಡಾ ರಾರಾ...

ಅಂದರು ಮಗೋಳ್ಳು ಸೆರವುಕು ಪೊಯ್ಯಿ ಶ್ಯಾಪಲು ತೆಸ್ತುಂಟೆ

ನಾ ಮೊಗಡು ಕಾಲ್ವಿಕಿ ಪೊಯ್ಯಿ ಕಪ್ಪಲು ತೆಚ್ಚಾಡೆ ಯಮ್ಮ ಕಪ್ಪಲು ತೆಚ್ಚಾಡೆ

ಅಂದರು ಮಗೋಳ್ಳು ಪ್ಯಾಂಟ್ಲೇಸ್ಕೋನಿ ಸಿನಿಮಾಕಿ ಪೋತುಂಟೆ

ನಾ ಮೊಗುಡು ನಿಕ್ಕರ್‌ವೇಸ್ಕೊನಿ ನಿದ್ದುರ್ ಪೋಯೇಡೆ ಯಮ್ಮಾ

ಅಂದರು ಮಗೋಳ್ಳು ಸೈಕಲ್ಲೇಸ್ಕೊನಿ ಸಿನಿಮಾಕಿ ಪೋತುಂಟೆ

ನಾ ಮೊಗಡು ಸೈಕಲ್ಲೇಸ್ಕೊನಿ ಬುರ್ಜುಲಾಕಿ ಪಡ್ಡಾಡೆ ಯಮ್ಮಾ....

ಅಂದರು ಮಗೋಳ್ಳು ಸಂತಕು ಪೊಯ್ಯಿ ಸರಕುಲು ತೆಸ್ತುಂಟೆ

ನಾ ಮೊಗುಡು ಪಾಗೊಂಡಿಕ್ ಪೊಯ್ಯಿ ಪಾಡಯ್ಯ ಪೊಯ್ಯಾಡೆ....

ಅಂದರು ಮಗೋಳ್ಳು ಬೆಂಗ್ಳೂರ್ಕಿ ಪೊಯ್ಯಿ ಬಿಸಿನೆಸ್ ಚೇಸ್ತುಂಟೆ

ನಾ ಮೊಗುಡು ಬೆಂಗ್ಳೂರ್ಕಿ ಪೊಯ್ಯಿ ಬೇವರ್ಸಯ್ಯಾಡೆ."*[೪]

ಅಡಿ ಟಿಪ್ಪಣಿ
[೩] ಸಣ್ಣಮ್ಮ (ವಕ್ತೃ ಗಾಯಕರು) ; ವಯಸ್ಸು ೫೫ ; ಶಂಕರಗಲ್ಲು,, ಮಡಕಶಿರಾ ತಾಲ್ಲೂಕು.

ಅಡಿ ಟಿಪ್ಪಣಿ
*[೪] ರಾಧಾ ಬಿನ್ ಶನಿವಾರಪ್ಪ, (ವಕ್ತೃ ಗಾಯಕರು) ; ವಯಸ್ಸು ೨೨, ಶಂಕರಗಲ್ಲು. ಮಡಕಶಿರಾ ತಾಲ್ಲೂಕು.

ತನ್ನ ಗಂಡನ ಬಗೆಗಿನ ದುರ್ಬಲತೆಯನ್ನು ಹೇಳುತ್ತಿರುವ ರೀತಿ ತಮಾಷೆಯಂತಿದ್ದು, ನೋಡುವರಿಗೆ, ಕೇಳುವರಿಗೆ ತಮಾಷೆಯಾಗಿ ಕಾಣಿಸುತ್ತದೆ. ಇಲ್ಲಿ ಬಳಸುವ ಪಾಗೊಂಡೆ (ಪಾವಗಡ), ಬೆಂಗಳೂರು ಪ್ರದೇಶಗಳು ಕರ್ನಾಟಕದಲ್ಲಿದ್ದರೂ, ತಮ್ಮ ಹಾಡಿನ ರೂಪದಲ್ಲಿ ಸಹಜವಾಗಿಯೇ ತಮಗೆ ಹತ್ತಿರದ ಪ್ರದೇಶವಾಗಿ ಬಳಕೆಯಾಗುವುದನ್ನಿಲ್ಲ ಕಾಣಬಹುದಾಗಿದೆ.

ಜಾಗತೀಕರಣ ಮತ್ತು ಸಮೂಹ ಮಾಧ್ಯಮಗಳ ಅಬ್ಬರದ ಯುಗದಲ್ಲಿ ಜಾನಪದ ಕಲೆಗಳು ನಶಿಸುತ್ತಿವೆಯೇನೊ ಎಂಬ ಭಾವನೆ ಬರುವುದು ಸಹಜ. ಆದರೆ ಜೀವಂತ ಜಾನಪದದ ಭಾಗವಾದ ಕಲೆಗಳು ಮನರಂಜನೆಯ ಸಾಧನವಾಗಿ ಮತ್ತು ತಮ್ಮ ಮೂಲ ಸತ್ವದ ಹಿನ್ನೆಲೆಯಲ್ಲಿ ಇಂದಿಗೂ ಜೀವಂತವಾಗಿ ಉಳಿದುಕೊಂಡು ಬರುತ್ತಿದ್ದುಗಡಿ ಭಾಗದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಿವೆ. ಜಾಗತೀಕರಣದ ನಡೆ ಸದಾ ಏಕಾಧಿಕಾರದ ಕಡೆಗೆ ಸಾಗುತ್ತಿರುತ್ತ, ಬಹುತ್ವವನ್ನು ಪ್ರತಿನಿಧಿಸುವ ವೈವಿಧ್ಯಮಯ ಜಾನಪದ ಕಲೆಗಳನ್ನು ಅಳಿಸಿ ಹಾಕುತ್ತವೆ ಎಂಬ ಮಾತು ಒಪ್ಪುವುದಕ್ಕೂ ಸಾಧ್ಯವಾಗುವುದಿಲ್ಲ. ಏಕೆಂದರೆ ಏಕಾಧಿಕಾರಕ್ಕಿಂತಲೂ, ಬಹುತ್ವದ ಗೌರವ ಬಹು ಮುಖ್ಯವಾದ ಅಂಶ. ಜಾನಪದ ಸಮುದಾಯದ ಜೀವನ ವೈವಿಧ್ಯಮಯವಾದ ಸಾಂಸ್ಕೃತಿಕ ಬಹುತ್ವವನ್ನೇ ಪ್ರತಿಪಾದಿಸುತ್ತದೆ. ಇತ್ತೀಚಿನ ಆಧುನಿಕ ಮಾಧ್ಯಮಗಳು ಮತ್ತು ಸಮೂಹ ಮಾಧ್ಯಮಗಳ ಅಬ್ಬರವನ್ನು ನಿರಾಕರಿಸಿ ಜೀವನದ ಸರಿಯಾದ ಕ್ರಮ ಪ್ರತಿಪಾದಿಸುವ ಜಾನಪದ ಕಲೆಗಳಲ್ಲಿರುವ ಸಾಮರಸ್ಯ ಮತ್ತು ಅವು ನೀಡುವ ಖುಷಿಯ ಕ್ಷಣಗಳನ್ನು ಸದಾ ನಮ್ಮ ಮುಂದೆ ತಂದಿರಿಸುತ್ತಿರುತ್ತವೆ. ಜೀವನ ಸಾಮರಸ್ಯದ ಕಡೆಗೆ ವೈಜ್ಞಾನಿಕ, ವೈಚಾರಿಕ, ಪ್ರಗತಿಪರ ಚಿಂತನೆಗಳು ಸಾಗುತ್ತಿರುವ ಈ ಹೊತ್ತಿನಲ್ಲಿ ಸಂಸ್ಕೃತಿ ಬಾಹುಳ್ಯದ ಜಾನಪದ ಕಲೆಗಳ ಅಧ್ಯಯನಗಳು ಇಂದು ಮುಖ್ಯವಾಗುತ್ತಿವೆ. ಇವು ಸಮಾಜದ ವಿವಿಧ ಸಮೂಹಗಳಿಗೆ ಸ್ವಾಯತ್ತತೆಯನ್ನು ಮತ್ತು ಸಾಮರಸ್ಯವನ್ನು ಒದಗಿಸಿಕೊಡುತ್ತವೆ.ಈ ಹಿನ್ನೆಲೆಯಲ್ಲಿ ಅಧಿಕಾರ ಕೇಂದ್ರದಿಂದ ದೂರ ಉಳಿದಿರುವ, ಆದರೂ ಸಾಂಸ್ಕೃತಿಕವಾಗಿ, ಬಹುತ್ವದ ಕಾರಣದಿಂದ ಸಮೃದ್ಧವಾಗಿರುವ, ಜಾನಪದ ಕಲೆಗಳು ಗಡಿನಾಡಿನ ಜನರ ಜೀವನಾಡಿಯಾಗಿವೆ. ಜಾತ್ರೆ, ಹಬ್ಬ, ಹರಿದಿನಗಳು, ಮದುವೆ ಮುಂತಾದ ಸಾಂಸ್ಕೃತಿಕ ಸಂಧರ್ಭಗಳಲ್ಲಿ ಇವು ಜನರ ನಡುವೆ ಜೀವಂತಿಕೆಯ ಮೂಲ ಸೆಲೆವಾಗಿ ಇಂದಿಗೂ ತನ್ನ ಸತ್ವವನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು :**

1. ಬಸವರಾಜ ಮಲಶೆಟ್ಟಿ :– 'ಕರ್ನಾಟಕದ ಜನಪದ ಕಲೆಗಳು' ; 'ಕರ್ನಾಟಕ ಸಂಗಾತಿ ; ಕನ್ನಡ ಅಭಿವೃದ್ಧಿ ಪ್ರಾಧಿಕಾರ, –ಬೆಂಗಳೂರು ; ೨೦೦೨ ಪುಟ ೧೦೯.
2. ಮಿಕ್ಕಿಲಿನೇನಿ ರಾಧಾ ಕೃಷ್ಣ ಮೂರ್ತಿ : 'ತೆಲುಗುವಾರಿ ಜಾನಪದ ಕಳಾ ರೂಪಾಲು' ; ತೆಲುಗು ವಿಶ್ವ ವಿದ್ಯಾಲಯಂ ಹೈದಾರಬಾದ್ ಪುಟ ಸಂಖ್ಯೆ –೬೩೮, ೬೩೯ ಕನ್ನಡಕ್ಕೆ ಕೆ. ಜಗನ್ನಾಥ್. ೧೯೯೨.